# ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ: ಕೆಡಿಪಿ–ಎಂಎಂಆರ್/ಸಿಆರ್–1/2018–19

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅಭಿವೃದ್ಧಿ)ರವರ ಕಛೇರಿ, ಅರಣ್ಯ ಭವನ,
ಬೆಂಗಳೂರು, ದಿನಾಂಕ: 30–04–2018.

## <u>ಅನಧಿಕೃತ ಟಿಪ್ಪಣಿ</u>

**ವಿಷಯ:–** 2018–19ನೇ ಸಾಲಿನ ವಾರ್ಷಿಕ ಕಾರ್ಯಕ್ರಮ ಅನುಷ್ಠಾನ ವೇಳಾಪಟ್ಟಿಯ ವರದಿ ಹಾಗೂ ವಾರ್ಷಿಕ ಕೆ.ಡಿ.ಪಿ. – ಎಂ.ಎಂ.ಆರ್. ಸಭೆಯ ನಡುವಳಿಯನ್ನು ನೀಡುವ ಕುರಿತು.

* * * * * *

2018–19ನೇ ಸಾಲಿಗೆ ಇಲಾಖೆಗೆ ಯೋಜನಾ ಲೆಕ್ಕ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ಅನುದಾನವನ್ನು ಹಂಚಿಕೆ ಮಾಡಿದ್ದು, ಈ ಅನುದಾನಕ್ಕೆ ವಾರ್ಷಿಕ ಕಾರ್ಯಕ್ರಮ ಅನುಷ್ಠಾನ ವೇಳಾ ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ ತಮ್ಮ ಘಟಕದಲ್ಲಿ ನಿರ್ವಹಣೆ ಮಾಡುತ್ತಿರುವ ಯೋಜನಾ ಲೆಕ್ಕ ಶೀರ್ಷಿಕೆಗಳಿಗೆ ಹಂಚಿಕೆಯಾಗಿರುವ ಅನುದಾನಕ್ಕೆ ತಕ್ಕಂತೆ ವಾರ್ಷಿಕ ಕಾರ್ಯಕ್ರಮಗಳ ಅನುಷ್ಠಾನ ವೇಳಾಪಟ್ಟಿ ತಯಾರಿಸುವ ಬಗ್ಗೆ ದಿನಾಂಕ 30–04–2018ರಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಅಧ್ಯಕ್ಷತೆಯಲ್ಲಿ ನಡೆದ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ ದಿನಾಂಕ 02–05–2018ರೊಳಗೆ ವೇಳಾಪಟ್ಟಿಯನ್ನು ತಯಾರಿಸಿ ಈ ಕಛೇರಿಗೆ ಕಳುಹಿಸುವುದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು), ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ 27 & 28–04–2018ರಂದು ಜರುಗುವ ಕೆ.ಡಿ.ಪಿ.–ಎಂ.ಎಂ.ಆರ್. ಸಭೆಯಲ್ಲಿ ನಿಮ್ಮ ಘಟಕಕ್ಕೆ ಸಂಬಂಧಿಸಿದಂತೆ ಚರ್ಚಿತವಾದ ವಿಷಯಗಳ ಸಭಾ ನಡವಳಿಯನ್ನು ಬುಲೆಟ್ ಪಾಯಿಂಟ್ ಮಾದರಿಯಲ್ಲಿ ಆದಷ್ಟು ಸಂಕ್ಷಿಪ್ತವಾಗಿ ತಯಾರಿಸಿ ದಿನಾಂಕ 03–05–2018ರೊಳಗೆ ಈ ಕಛೇರಿಗೆ ಕಳುಹಿಸುವುದು.

**ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
**(ಅಭಿವೃದ್ಧಿ) ಬೆಂಗಳೂರು.**

**<u>ಪ್ರತಿಯನ್ನು:–</u>**

1. ಗೌರವಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
2. ಶುಭಾಶಯಗಳೊಂದಿಗೆ ವ್ಯವಸ್ಥಾಪಕ ನಿರ್ದೇಶಕರು ಮತ್ತು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಕೆ.ಎಫ್.ಡಿ.ಸಿ. / ಕೆ.ಎಸ್.ಎಫ್.ಐ.ಸಿ. ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
3. ಗೌರವಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ವನ್ಯಜೀವಿ), ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
4. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ / ಯೋಜನೆಗಳು / ಅರಣ್ಯ ಸಂಪನ್ಮೂಲ ನಿರ್ವಹಣೆ / ಇಡಬ್ಲ್ಯೂಪಿಆರ್‌ಟಿ / ಕಾರ್ಯಯೋಜನೆ / ಸಂಶೋಧನೆ ಮತ್ತು ಬಳಕೆ / ಸಂಪರ್ಕ ಮತ್ತು ಮಾಹಿತಿ / ಸಿಬ್ಬಂದಿ ಮತ್ತು ನೇಮಕಾತಿ / ಅರಣ್ಯ ಸಂರಕ್ಷಣೆ / ಜಾಗೃತ / ಭೂ–ದಾಖಲೆ / ಕೇಂದ್ರಸ್ಥಾನ ಮತ್ತು ಸಮನ್ವಯ, / ಕಾಂಪಾ / ವನ್ಯಜೀವಿ / ಎನ್‌ಎಫ್‌ಎಪಿ–ಬಿಎಂ, ಇವರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
5. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೆಂಪಾ, ವನವಿಕಾಸ, ಬೆಂಗಳೂರು.
6. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮೌಲ್ಯಮಾಪನ / ಕಾನೂನು ಕೋಶ / ಕೇಂದ್ರಸ್ಥಾನ / ಐ.ಸಿ.ಟಿ. / ಆಯವ್ಯಯ ಮತ್ತು ಆಡಿಟ್ ಇವರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.